


## ಆಕಾಶವೇ ಪ್ರವಾಸೀತಾಣ!

ನೆಲ, ಜಲ, ಪಾತಾಳಗಳ ವಿಶಿಷ್ಟ ತಾಣಗಳನ್ನು ಪ್ರವಾಸಿಗರಿಗೆ ತೆರೆದಿಟ್ಟು ಉದ್ಯಮವನ್ನಾಗಿಸುವುದು ನಮಗೆ ಗೊತ್ತು. ಆಕಾಶವನ್ನೇ ಪ್ರವಾಸೀ ತಾಣವನ್ನಾಗಿಸಿಕೊಂಡಿದ್ದು ಕತಾತೂಂಬೊ ಪಟ್ಟಣದ ಹೆಗ್ಗಳಿಕೆ. ನಮ್ಮ ದೇಶದಲ್ಲೂ ಲೇಹ್‌ನಲ್ಲಿರುವ ಹ್ಯಾನ್ಲೆ ಎಂಬ ಊರಿನ ರಾತ್ರಿಯ ನಿರಭ್ರ ಆಕಾಶದ ನಕ್ಷತ್ರಲೋಕವನ್ನು ಪ್ರದರ್ಶನಕ್ಕೆ ಇಡಲಾಗಿದೆ. ಈಚೆಗೆ ಅಲ್ಲಿ ಸೂರ್ಯನಿಂದ ಹೊಮ್ಮಿದ ಸೌರಗಾಳಿಯೊಂದು ಬೀಸಿ ಬಂದು ವಿಶಿಷ್ಟವಾದ ಬಹುವರ್ಣದ ಧ್ರುವಪ್ರಭೆಯನ್ನು ಸೃಷ್ಟಿಸಿತ್ತು.





ಗ್ರಾಫಿಕ್ಸ್‌ನಲ್ಲಿ ಮಿಂಚು ಮೂಡುವ ಪ್ರಕ್ರಿಯೆ

ಜೀವಜಾಲದ ಅಧ್ಯಯನಕ್ಕೂ ಪ್ರವಾಸಿಗರು ಬರುತ್ತಿರುತ್ತಾರೆ.

ಸರೋವರದ ಅಂಚಿನಲ್ಲಿ ಅಲ್ಲಲ್ಲಿ ನೀರಿನಲ್ಲೇ (ಕಂಬಗಳ ಮೇಲೆ) ಮೀನುಗಾರರ ಸಾಂಪ್ರದಾಯಿಕ ಮನೆಗಳಿವೆ. ಈ ಕಂಬದಮನೆಗಳನ್ನು ನೋಡಿಯೇ 1499ರಲ್ಲಿ ಪ್ರವಾಸಿ ಅಮೆರಿಗೊ ವೆಸ್‌ಪುಸಿ ಎಂಬಾತ ಇಡೀ ದೇಶಕ್ಕೆ ವೆನೆಝುವೆಲಾ (ಪುಟ್ಟ ವೆನಿಸ್) ಎಂದು ನಾಮಕರಣ ಮಾಡಿದ.

ಮಿಂಚಿನ ನಿತ್ಯ ದೀಪೋತ್ಸವವನ್ನು ನೋಡಲೆಂದೇ ಕ್ಯಾಮೆರಾಗಳನ್ನೂ ಡ್ರೋನ್‌ಗಳನ್ನೂ ಹೊತ್ತು ಕತಾತೂಂಬೊ ಪಟ್ಟಣಕ್ಕೆ ಬರುವ ಪ್ರವಾಸಿಗಳು ನೀರಿನ ನಡುವಣ ಅಟ್ಟಣಿಗೆಗಳಲ್ಲೇ ಆರಾಮ್ ಕುರ್ಚಿ ಹಾಕಿಕೊಂಡು ಆಕಾಶದ ದೊಂದಿಗಳು ನೀರಿನಲ್ಲಿ ಪ್ರತಿಫಲಿಸುವುದನ್ನು ದಾಖಲಿಸುತ್ತಿರುತ್ತಾರೆ. ಸಿಡಿಲು ಬಡಿದು ವರ್ಷಕ್ಕೆ ಸರಾಸರಿ ಇಬ್ಬರು ಸಾಯುತ್ತಾರೆ ಎಂದು ಸ್ಥಳೀಯ ವಾಯೂ, ಯಾಕ್ಪಾ ಮತ್ತು ವಾಆರಿ ಮೂಲ ನಿವಾಸಿಗಳು ಎಚ್ಚರಿಕೆ ನೀಡಿದರೂ ದೋಣಿಯಲ್ಲಿ ಇನ್ನಷ್ಟು ಮತ್ತಷ್ಟು ಹತ್ತಿರಕ್ಕೆ ಸಾಗುವ ದುಸ್ಸಾಹಸಿಗಳೂ ಇದ್ದಾರೆ.

ಪ್ರವಾಸಿಗಳಿಗೆ ಅಪರೂಪಕ್ಕೆ ಕೆಲವೊಮ್ಮೆ ನಿರಾಸೆಯಾಗುವುದೂ ಇದೆ. ಇಂಥ ತಿಂಗಳಲ್ಲಿ, ಇಂಥ ರಾತ್ರಿಗಳಲ್ಲಿ ಇಂತಿಷ್ಟು ಬಾರಿ ಮಿಂಚುತ್ತದೆ ಎಂಬುದನ್ನು ನಿಖರವಾಗಿ ಮುನ್ಸೂಚನೆ ನೀಡುವುದು ವಿಜ್ಞಾನಿಗಳಿಗೆ ಇನ್ನೂ ಸಾಧ್ಯವಾಗಿಲ್ಲ. ಹತ್ತು ವರ್ಷಗಳ ಹಿಂದೆ ಬರಗಾಲ ಬಂದಿತ್ತು. ಜನವರಿಯಿಂದ ಮಾರ್ಚ್‌ವರೆಗೆ ಒಮ್ಮೆಯೂ ಮೋಡಕಟ್ಟಿರಲಿಲ್ಲ; ಒಂದು ಮಿಂಚೂ ಹೊಮ್ಮಲಿಲ್ಲ. ವಿಶ್ವ ಪರಂಪರೆ ಮುಗಿದೇ ಹೋಯಿತೇ ಎಂಬ ಆತಂಕ ಆಗ ಎದ್ದಿತ್ತಾದರೂ, ನಿರಾಸೆಯ ಆ ಕಾರ್ಮೋಡದ ಮಧ್ಯೆಯೇ ಮಿಂಚು ಮತ್ತೆ ಥಳಥಳಿಸತೊಡಗಿತ್ತು.

ಸಿಡಿಮಿಡಿ ಮೋಡಗಳು ಈ ಪ್ರಕೃತಿಯ ವರದಾನ. ಪ್ರತಿ ಬಾರಿ ಆಕಾಶದಲ್ಲಿ ವಿದ್ಯುತ್ ಸಂಘರ್ಷ ನಡೆದಾಗಲೂ ವಾತಾವರಣದ ಆಮ್ಲಜನಕ ಮತ್ತು ಸಾರಜನಕದ ಅಣುಗಳು ಒಡೆದು ಹೋಳಾಗುತ್ತವೆ. ಅದರಿಂದ ಓಝೋನ್ ಮತ್ತು ನೈಟ್ರೊಜನ್ ಆಕ್ಸೈಡ್ ಎಂಬ ಎರಡು ಅನಿಲಗಳು ಉತ್ಪನ್ನವಾಗುತ್ತವೆ. ಓಝೋನ್ ಮೇಲಕ್ಕೇರಿ, ಆಕಾಶದಾಚೆಗೆ ಹೋಗಿ ಭೂಮಂಡಲಕ್ಕೆ ರಕ್ಷಾಕವಚವಾಗುತ್ತದೆ. ಇತ್ತ ನೈಟ್ರೊಜನ್ ಆಕ್ಸೈಡ್ ಭೂಮಿಗೆ ಇಳಿದು, ಇಲ್ಲಿನ ಸಸ್ಯ ಮತ್ತು ಶಿಲೀಂಧ್ರಗಳಿಗೆ ಸಾರಜನಕದ ರಸಗೊಬ್ಬರವನ್ನು ಉಣಿಸುತ್ತದೆ. ಹಾಗಾಗಿ ಸಿಡಿಲಿನ ಸದ್ದು ಕೇಳುತ್ತಲೇ ಗಿಡಮರಗಳು ಹಸಿರಾಗುತ್ತವೆ. ಮಳೆ ಹನಿಯ ಸ್ಪರ್ಶವಾಗದಿದ್ದರೂ ಹಸಿರು ಚಿಮ್ಮಿಸುತ್ತವೆ. ನೆಲದಲ್ಲಿ ಅಣಬೆಗಳು ಚಿಗುರುತ್ತವೆ. ಸಂತಸ, ಸಂಭ್ರಮದಿಂದ ನಮ್ಮಲ್ಲಂತೂ ನವಿಲೂ ನಾಟ್ಯವಾಡುತ್ತದೆ.

ಆದರೆ ನೋಡಿ, ನಮ್ಮ ಆಧುನಿಕ ಬದುಕಿನ ಬಹುತೇಕ ಚಟುವಟಿಕೆಗಳೆಲ್ಲ ಮಿಂಚಿನ ಕೆಲಸಕ್ಕೆ ತದ್ವಿರುದ್ಧವಾಗಿರುತ್ತವೆ. ಓಝೋನ್ ಅನಿಲ ಆಕಾಶದಲ್ಲಿ ಸೃಷ್ಟಿಯಾಗುವ ಬದಲು ನೆಲಮಟ್ಟದಲ್ಲೇ ಹೊಮ್ಮಿದರೆ ಅದು ಇಲ್ಲಿನ ಎಲ್ಲರ ಆರೋಗ್ಯಕ್ಕೆ ಅಪಾಯ. ನೈಟ್ರೊಜನ್ ಆಕ್ಸೈಡ್‌ಗಳು ಸಸ್ಯಗಳಿಗೆ ಸೇರುವ ಬದಲು ಆಕಾಶಕ್ಕೆ ಸೇರಿದರೆ ಅದು ವಾತಾವರಣವನ್ನು ಬಿಸಿ ಮಾಡುತ್ತ, ಅದೂ ಅಪಾಯವನ್ನೇ ತಂದೊಡ್ಡುತ್ತದೆ. ಕೈಗಾರಿಕೆಗಳಲ್ಲಿ, ವಾಹನಗಳ ಹೊಗೆಯಲ್ಲಿ ಇವೆರಡೂ ಉತ್ಪನ್ನವಾಗುತ್ತ ಭೂಮಿಯನ್ನು ಬಿಸಿಪ್ರಳಯದ ಅಂಚಿಗೆ ತಂದಿವೆ.

ಸದ್ಯ, ಆಕಾಶದಲ್ಲಿ ಮಿಂಚಿನ ಕಾರ್ಯಾಚರಣೆ ಸದಾ ನಡೆಯುತ್ತಿದೆ. ಪ್ರತಿ ಸೆಕೆಂಡ್‌ಗೆ 40 ಕೋಲ್ಮಿಂಚುಗಳು ಜಗತ್ತಿನ ಒಂದಲ್ಲ ಒಂದು ಕಡೆ ಮಿನುಗುತ್ತ ಅಡಗುತ್ತಿರುತ್ತವೆ. ನೆಲದ ಮೇಲಿನ ಮನುಷ್ಯರು ಅಹೋರಾತ್ರಿ ಜೀವಲೋಕದ ಧ್ವಂಸ ಕಾರ್ಯದಲ್ಲಿ ತೊಡಗಿದ್ದರೂ ಆಕಾಶದ ಶಕ್ತಿಗಳು ನಿರಂತರವಾಗಿ ಭೂಮಂಡಲದ ರಕ್ಷಣೆಯಲ್ಲಿ ತೊಡಗಿವೆ. ಕತಾತೂಂಬೊ ಎಂಬ ಥಿಯೇಟರಿನಲ್ಲಿ ಅದರ ಥಳಕು ಬೆಳಕಿನ ಶೋ ನಿತ್ಯ ನಡೆಯುತ್ತಿದೆ. ■

### ತೈಲನಿಕ್ಷೇಪದ ಮೇಲಿನ ಊರು

ವೆನೆಝುವೆಲಾ ವಿಚಿತ್ರ ದೇಶ. ಜಗತ್ತಿನ ಅತಿ ಹೆಚ್ಚು ತೈಲನಿಕ್ಷೇಪ ಇರುವ ದೇಶವೆಂದು ಖ್ಯಾತಿ ಪಡೆದಿದ್ದರೂ ಇಲ್ಲಿನ ಶೇ. 90ರಷ್ಟು ಜನರು ಕಡುಬಡವರು. ಆರ್ಥಿಕ ಮುಗ್ಗಟ್ಟಿನಿಂದಾಗಿ 2018ರಲ್ಲಿ ಬೆಲೆಯೇರಿಕೆ ಎಷ್ಟಾಗಿತ್ತೆಂದರೆ ಒಂದು ಕಿಲೋ ಸಕ್ಕರೆಗೆ ಒಂದು ಮೂಟೆಯಷ್ಟು ಹಣವನ್ನು (26 ಲಕ್ಷ ಬೊಲಿವರ್) ತೆರಬೇಕಾಗಿ ಬಂದಿತ್ತು. ಕಾರ್ಮಿಕರಿಗೆ ಮೊಟ್ಟೆ ರೂಪದಲ್ಲೇ ಸಂಬಳ ನೀಡಲಾಗಿತ್ತು. ಕತಾತೂಂಬೊ ಪಟ್ಟಣವೂ ಅದರಾಚಿನ ಸರೋವರ, ಸಮುದ್ರವೂ ತೈಲನಿಕ್ಷೇಪದ ಮೇಲೇ ನಿಂತಿದೆ.